


# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ನಾಮಪತ್ರ ಸಲ್ಲಿಕೆ**

ಬಿಜೆಪಿ ಅಭ್ಯರ್ಥಿ ಬಿವೈ ರಾಘವೇಂದ್ರ ನಾಮಪತ್ರ ಸಲ್ಲಿಕೆ


ಶುಕ್ರವಾರ,19ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-59 | ● ಉಚಿತ | ● | ● www.suddisanchaari.in







# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ಬಿಜೆಪಿ ಸೇರ್ಪಡೆ**

ಶಿಕಾರಿಪುರ ಬ್ಲಾಕ್ ಕಾಂಗ್ರೆಸ್ ಹಾಗೂ ಶಿರಾಳಕೊಪ್ಪ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಹೇಶ್ ಹುಲ್ಮಾರ್ ಹಾಗೂ ಕೌಲಿ ಗಂಗಾಧರ್


ಶುಕ್ರವಾರ,19ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-59 | ● ಉಚಿತ | ● | ● www.suddisanchaari.in


# ಅಭಿವೃದ್ಧಿಯ ಮೇಲೆ ಮತ ಕೇಳುವೆ: ಬಿ.ವೈ.ರಾಘವೇಂದ್ರ

## ಸಂಸದ ಬಿ.ವೈ.ರಾಘವೇಂದ್ರ ನಾಮಪತ್ರಸಲ್ಲಿಕೆ ಮೆರವಣಿಗೆಯಲ್ಲಿ ಜನಸಾಗರ





ಸುದ್ದಿ-ಸಂಚಾರಿ
ಶಿವಮೊಗ್ಗ:
ಶಿವಮೊಗ್ಗ ಕ್ಷೇತ್ರದಲ್ಲಿ ರಾಘವೇಂದ್ರ 3 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಶಿವಮೊಗ್ಗದಲ್ಲಿ ಗುರುವಾರ ಲೋಕಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ಬಿ.ವೈ. ರಾಘವೇಂದ್ರ ಪರ ಮೆರವಣಿಗೆಯಲ್ಲಿ ಪಾಲ್ಗೊಂಡು ನಂತರ ಬಹಿರಂಗ ಸಮಾವೇಶದಲ್ಲಿ ಅವರು ಮಾತನಾಡಿದರು.

ಮನೆಮನೆಗೆ ಹೋಗಿ ಮತದಾರರ ಮನವೊಲಿಸುವ ಕಾರ್ಯವನ್ನು ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಒಟ್ಟಾಗಿ ಮಾಡುವ ಅಗತ್ಯವಿದೆ. ಯಾವುದೇ ಕಾರಣಕ್ಕೂ ಮೈ ಮರೆಯಬಾರದು. ಒಂದಾಗಿ ಚುನಾವಣೆ ಎದುರಿಸೋಣ. ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ಅವರು ಒಟ್ಟಾಗಿ ಚುನಾವಣೆ ಎದುರಿಸುತ್ತಿದ್ದಾರೆ. ಹೀಗಾಗಿಯೇ ರಾಜ್ಯದಲ್ಲಿ ನಾವು 28 ಕ್ಷೇತ್ರಗಳಲ್ಲಿ ಗೆಲುವಿನ ನಗೆ ಬೀರಲಿದ್ದೇವೆ. ಲೋಕಸಭಾ ಚುನಾವಣೆಯಲ್ಲಿ ಗೆದ್ದರೆ ಯಾರು ಪ್ರಧಾನಿ ಆಗುತ್ತಾರೆ ಎಂಬುದೇ ಕಾಂಗ್ರೆಸ್ ಪಕ್ಷದವರಿಗೆ ಗೊತ್ತಿಲ್ಲ. ಅದೊಂದು ಮುಳುಗುತ್ತಿರುವ ಹಡಗು ಎಂದು ಲೇವಡಿ ಮಾಡಿದರು.

ಜೆಡಿಎಸ್ ಬಿಜೆಪಿ ಕಾರ್ಯಕರ್ತರು ಒಗ್ಗಟ್ಟಾಗಿ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ಶಿವಮೊಗ್ಗ ಕ್ಷೇತ್ರದಲ್ಲಿ ಉತ್ತಮ ಹೊಂದಾಣಿಕೆ ಇದೆ. ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಹೆಚ್ಚಿನ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಹೇಳಿದರು.
ನಾಮಪತ್ರ ಸಲ್ಲಿಕೆಯ ಮೆರವಣಿಗೆಯಲ್ಲಿ ಅಪಾರ ಪ್ರಮಾಣದಲ್ಲಿ ಜನಸ್ತೋಮ ಭಾಗವಹಿಸಿದೆ. ಜನರ ಉತ್ಸಾಹ ನೋಡಿದರೆ ನೂರಕ್ಕೆ ನೂರು ಶಿವಮೊಗ್ಗ ಕ್ಷೇತ್ರವನ್ನು ನರೇಂದ್ರ ಮೋದಿ ಅವರಿಗೆ ಅರ್ಪಣೆ ಮಾಡಲಿದ್ದಾರೆ ಎಂದರು.
ಜೆಡಿಎಸ್ ಶಾಸಕಿ ಶಾರದಾ ಪೂರ್ಯನಾಯ್ಕ ಮಾತನಾಡಿ, 'ಹೈಕಮಾಂಡ್ ಅಣತಿಯಂತೆ ಕೆಲಸ ಮಾಡುತ್ತಿದ್ದೇವೆ. ಪಕ್ಷದ ಕಾರ್ಯಕರ್ತರು ಗೆಲುವಿಗೆ ಶ್ರಮಿಸಲಿದ್ದಾರೆ' ಎಂದರು.
ಮೆರವಣಿಗೆಯಲ್ಲಿ ಸಂಸದ ಮುನಿಸ್ವಾಮಿ, ಶಾಸಕರಾದ ಎಸ್.ಎನ್.ಚನ್ನಬಸಪ್ಪ, ಗುರುರಾಜ ಗಂಟಿಹೊಳಿ, ಬೈರತಿ ಬಸವರಾಜ, ವಿಧಾನ ಪರಿಷತ್ ಸದಸ್ಯರಾದ ಎಸ್.ರುದ್ರೇಗೌಡ, ಡಿ.ಎಸ್.ಅರುಣ್, ಎಸ್.ಎಲ್.ಬೋಜೇಗೌಡ, ಮಾಜಿ ಸಚಿವರಾದ ಕುಮಾರ್ ಬಂಗಾರಪ್ಪ, ಹರತಾಳು ಹಾಲಪ್ಪ, ಮಾಜಿ ಶಾಸಕರಾದ ಕೆ.ಬಿ.ಅಶೋಕ ನಾಯ್ಕ, ಕೆ.ಬಿ.ಪ್ರಸನ್ನಕುಮಾರ್, ಅರುಣ್ ಕುಮಾರ್ ಪುತ್ತಿಲ, ಮಾಳವಿಕಾ ಅವಿನಾಶ್, ಟಿ.ಡಿ.ಮೇಘರಾಜ್ ಪಾಲ್ಗೊಂಡಿದ್ದರು.

## ಎಚ್.ಡಿ.ಕುಮಾರಸ್ವಾಮಿ



ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, 'ರಾಜ್ಯದಲ್ಲಿ 28 ಕ್ಷೇತ್ರಗಳಲ್ಲೂ ಜೆಡಿಎಸ್-ಬಿಜೆಪಿ ಮೈತ್ರಿಕೂಟ ಗೆಲುವು ಸಾಧಿಸಲಿದೆ. ಬಿಜೆಪಿಯಲ್ಲಿ ಭಿನ್ನಮತದ ವಿಚಾರವನ್ನು ಆ ಪಕ್ಷದ ಹೈಕಮಾಂಡ್ ಬಗೆಹರಿಸುತ್ತದೆ' ಎಂದರು.

## ಬಸವರಾಜ್ ಬೊಮ್ಮಾಯಿ



ಸೌಮ್ಯ ಸೌಭಾವದ ರಾಘವೇಂದ್ರ ಒಬ್ಬ ಸಂಸದರಾಗಿ ಎಷ್ಟು ಅಭಿವೃದ್ಧಿ ಕಾರ್ಯಮಾಡಬಹುದು ದೇಶಕ್ಕೆ ತೋರಿಸಿದ್ದಾರೆ. ಅವರು ಯಡಿಯೂರಪ್ಪ ಅವರಗಿಂತ ಹೆಚ್ಚಿನ ಲೀಡ್ ಅಲ್ಲಿ ಗೆಲ್ಲುವು ಸಾಧಿಸಬೇಕು ಎಂದಯ ಕರೆಕೊಟ್ಟರು

## ಸಿ.ಟಿ.ರವಿ



ರಾಷ್ಟ್ರ ರಕ್ಷಣೆ ಹಾಗೂ ಹಿಂದುತ್ವದ ಉಳಿವಿಗಾಗಿ ಬಿಜೆಪಿ ಪಕ್ಷ ಹುಟ್ಟಿಕೊಂಡಿದೆ. ಹಾಗಾಗಿ, ಮತದಾರರು ಬಿಜೆಪಿಯನ್ನು ಬೆಂಬಲಿಸ ಬೇಕು. ಬಿಜೆಪಿಯಿಂದ ಮಾತ್ರ ದೇಶ ರಕ್ಷಣೆ ಸಾಧ್ಯ ಎಂದು ಸಿ.ಟಿ.ರವಿ ಹೇಳಿದರು





ಶಿಕಾರಿಪುರ ಕುಮದ್ವತಿ ಪಿಯು ಕಾಲೇಜು ಪ್ರವೇಶ ಪ್ರಾರಂಭ




## ಪೋಕ್ಸೊ

ಆನವಟ್ಟಿ: ಪ್ರೀತಿ ಮಾಡುವುದಾಗಿ ನಂಬಿಸಿ, ಬಾಲಕಿಯನ್ನು ಅಪಹರಿಸಿ ಅತ್ಯಾಚಾರಕ್ಕೆ ಪ್ರಯತ್ನಿಸಿದ ಘಟನೆ ತಾಲ್ಲೂಕಿನ ಅಗಸನಹಳ್ಳಿ ಗ್ರಾಮದಲ್ಲಿ ನಡೆದಿದೆ.
'ತಾಲ್ಲೂಕಿನ ಅಗಸನಹಳ್ಳಿ ಗ್ರಾಮದ ರವಿ ಎಂಬ ಯುವಕ ಅದೇ ಗ್ರಾಮದ ಬಾಲಕಿಗೆ ಪ್ರೀತಿ, ಪ್ರೇಮದ ಹೆಸರಿನಲ್ಲಿ ಮದುವೆಯಾಗುವುದಾಗಿ ನಂಬಿಸಿ ಬಾಲಕಿಯನ್ನು ಪುಸಲಾಯಿಸಿ ಕಾಡಿಗೆ ಕರೆದುಕೊಂಡು ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ನಂತರ ಬಾಲಕಿಯನ್ನು ದೂರದ ಸಂಬಂಧಿಕರ ಮನೆಯಲ್ಲಿ ಇರಿಸಿ ಪರಾರಿಯಾಗಿದ್ದಾನೆ' ಎಂದು ಬಾಲಕಿಯ ತಾಯಿ ಆನವಟ್ಟಿ ಪೊಲೀಸ್ ಠಾಣೆಗೆ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಪೋಕ್ಸೊ ಕಾಯ್ದೆಯಡಿ ಪೊಲೀಸರು ಬುಧವಾರ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಶಾಲು ಹೊದಿಸಿ ಮಹೇಶ್ ಹುಲ್ಮಾರ್ ಅವರನ್ನು ಪಕ್ಷಕ್ಕೆ ಬರ ಮಾಡಿಕೊಂಡರು.

## ಹುಲ್ಮಾರ್ ಮಹೇಶ ಬಿಜೆಪಿಗೆ

ಸುದ್ದಿ-ಸಂಚಾರಿ | ಶಿವಮೊಗ್ಗ

ಶಿಕಾರಿಪುರ ಪುರಸಭೆಯ ಸದಸ್ಯ ಹಾಗೂ ಶಿಕಾರಿಪುರ ಬ್ಲಾಕ್ ಕಾಂಗ್ರೆಸ್ ಪಕ್ಷದ ನಿಕಟಪೂರ್ವ ಅಧ್ಯಕ್ಷ ಮಹೇಶ್ ಹುಲ್ಮಾರ ತಮ್ಮ ಬೆಂಬಲಿಗರ ಜೊತೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಮ್ಮುಖದಲ್ಲಿ ಬಿಜೆಪಿ ಪಕ್ಷ ಸೇರ್ಪಡೆಯಾದರು. ಇದೇ ಸಂದರ್ಭದಲ್ಲಿ ಶಿರಾಳಕೊಪ್ಪ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೌಲಿ ಗಂಗಾಧರ್, ಮಾಜಿ ಸಚಿವ ಕಾಗೋಡ ತಿಮ್ಮಪ್ಪ ಅವರ ಆಪ್ತ ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಹಕ್ರಿ ಬಿಜೆಪಿ ಸೇರ್ಪಡೆಯಾದರು.



ಶಿವಮೊಗ್ಗದಲ್ಲಿ ಗುರುವಾರ ನಡೆದ ನಾಮಪತ್ರ ಸಲ್ಲಿಕೆ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ.ಕುಮಾರ ಸ್ವಾಮಿ, ಬಸವರಾಜ್ ಬೊಮ್ಮಾಯಿ, ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಸಿ.ಟಿ.ರವಿ,ಅರಗ ಜ್ಞಾನೇಂದ್ರ,ಬೈರತಿ ಬಸವರಾಜ್, ಶಾಸಕ ಚೆನ್ನಿ, ಮಾಜಿ ಶಾಸಕ ಪ್ರಸನ್ನ ಕುಮಾರ್ ಇದ್ದಾರೆ

## ಕಾಂಗ್ರೆಸ್ : ಶಿವಮೊಗ್ಗಕ್ಕೆ ಸುರ್ಜೆವಾಲಾ



ಸುದ್ದಿ-ಸಂಚಾರಿ

ಶಿವಮೊಗ್ಗ: ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಏ. 19 ರಂದು ಶುಕ್ರವಾರ ಮಧ್ಯಾಹ್ನ 12.30ಕ್ಕೆ ಶಿವಮೊಗ್ಗಕ್ಕೆ ಭೇಟಿ ನೀಡಲಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಸಮಿತಿ ಆಯೋಜಿಸಿರುವ ಗ್ಯಾರಂಟಿ ಹಬ್ಬವನ್ನು ಉದ್ಘಾಟಿಸಿ, ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡಲಿದ್ದಾರೆ.

ನಂತರ ಸಚಿವರು, ಶಾಸಕರು, ಮಾಜಿ ಶಾಸಕರು ಹಾಗೂ ಪ್ರಮುಖರ ಪ್ರತ್ಯೇಕ ಸಭೆ ನಡೆಸಿ ಚುನಾವಣಾ ಕಾರ್ಯತಂತ್ರದ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಸಂಯೋಜಕ ಜಿ.ಡಿ. ಮಂಜುನಾಥ್ ತಿಳಿಸಿದ್ದಾರೆ.

## ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ :ಇಬ್ಬರ ಸಾವು




ಸುದ್ದಿ-ಸಂಚಾರಿ

ಹೊಳೆಹೊನ್ನೂರು: ಸಮೀಪದ ಆಗರದಹಳ್ಳಿ ಕ್ರಾಸ್‌ನಲ್ಲಿ ಮುಂದೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಹೋಗಿ, ರಸ್ತೆಬದಿಯ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿಯಾದ ಪರಿಣಾಮ ಯುವಕರಿಬ್ಬರು ಸ್ಥಳದಲ್ಲೇ ಸಾವನಪ್ಪಿದ್ದಾರೆ.

ತೀರ್ಥಹಳ್ಳಿ ಹೊಸೂರು ಮೂಲದ ಎಚ್.ಆರ್ ಧನುಷ್ (24) ಹಾಗೂ ಆತನ ಸ್ನೇಹಿತ ಮೃತಪಟ್ಟಿದ್ದು, ಹೆಸರು ತಿಳಿದುಬಂದಿಲ್ಲ.

ಗುರುವಾರ ಸಂಜೆ ಚಿತ್ರದುರ್ಗದ ಕಡೆಯಿಂದ ಅರಹತೊಳಲು ಕೈಮರ ಮಾರ್ಗವಾಗಿ ಶಿವಮೊಗ್ಗದತ್ತ ಹೋಗುವಾಗ ಆಗರದಹಳ್ಳಿ ಕ್ರಾಸ್‌ನಲ್ಲಿ ಮುಂದೆ ಹೋಗುತ್ತಿದ ಬೈಕ್ ದಿಢೀರನೆ ತಿರುವು ತೆಗೆದುಕೊಂಡಿದೆ. ಬೈಕ್‌ನ ಹಿಂಬದಿಯಲ್ಲಿ ಬರುತ್ತಿದ ಯುವಕರು ಅಪಘಾತ ತಪ್ಪಿಸಲು ಹೋಗಿ ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಸಾವನಪ್ಪಿದ್ದಾರೆ. ಹೊಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ

**ನುಡಿನಮನ**

ಕನ್ನಡ ಚಿತ್ರರಂಗದ ಖ್ಯಾತ ನಟ,ನಿರ್ದೇಶಕ,ನಿರ್ಮಾಪಕ ದ್ವಾರಕೀಶ್ ಅವರ ಕುರಿತು ಲೇಖನ ಸಿನಿ ಸ್ವಾರಸ್ಯದಲ್ಲಿ

ಶುಕ್ರವಾರ,19ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-59 | ● ಉಚಿತ | ● | ● www.suddisanchaari.in



**Top News** ಕ್ಲೆರ್ ವೇದ ಆಯುರ್ ಕ್ಲಿನಿಕ್ (ನಿಸರ್ಗ ಮನೆ)

## ‘ಪುರಾತನ ಆಯುರ್ವೇದ ಪದ್ಧತಿ, ಕಾಯಿಲೆಗಳಿಗೆ ರಾಮಬಾಣ’

ಸುದ್ದಿ-ಸಂಚಾರಿ
ಆನವಟ್ಟಿ: ಶಸ್ತ್ರ ಚಿಕಿತ್ಸೆ, ಸರ್ಜರಿ ಚಿಕಿತ್ಸೆ ಹಾಗೂ ಮಾತ್ರೆಗಳನ್ನು ಸೇವಿಸದೆ, ಕಾಯಿಲೆಗಳು ವಾಸಿಯಾಗಬೇಕಾದರೆ, ಪುರಾತನ ಪದ್ಧತಿಯ ಭಾರತೀಯ ಆಯುರ್ವೇದ ಔಷಧಿಗಳ ಬಳಕೆ, ಪ್ರಾಕೃತಿಕ ಚಿಕಿತ್ಸೆ ಪದ್ಧತಿ ಹಾಗೂ ಉತ್ತಮ ಆಹಾರ ಪದ್ಧತಿ ಆಳವಡಿಕೆಯಿಂದ ಮಾತ್ರ ಸಾಧ್ಯ ಎಂದು ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಅಭಿಪ್ರಾಯಿಸಿದರು.

ಈಚೆಗೆ ಪಟ್ಟಣದಲ್ಲಿ ಕ್ಲೆರ್ ವೇದ ಆಯುರ್ ಕ್ಲಿನಿಕ್ (ನಿಸರ್ಗ ಮನೆ) ಆನವಟ್ಟಿ ಶಾಖೆಯ ಪ್ರಾರಂಭೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ‘ನಗೆಹಬ್ಬ’ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೋವಿಡ್ ಸಂದರ್ಭದಲ್ಲಿ ಬಹುತೇಕರು ಪುರಾತನ ಆಯುರ್ವೇದ ಪದ್ಧತಿಗೆ ಮರೆಹೋದರು. ನಂತರದಲ್ಲಿ ಆಯುರ್ವೇದ ಪದ್ಧತಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಪಿಜಿಯೋ ಥೇರೆಪಿ, ಒರ್ಝೋ ಥೇರೆಪಿ, ಹಾಗೂ ಆಹಾರ ಪದ್ಧತಿಗಳ ಮೂಲಕ ಯಾವುದೇ ನೋವು, ಪಾರ್ಶ್ವವಾಯು, ಸಕ್ಕರೆ ಕಾಯಿಲೆ, ರಕ್ತದ ಒತ್ತಡ ಸೇರಿದಂತೆ ಗುಣಪಡಿಸಲು ಸಾಧ್ಯವಾಗದ ಕಾಯಿಲೆಗಳಿಗೆ, ಪ್ರಾಕೃತಿಕ (ನಿಸರ್ಗ) ಚಿಕಿತ್ಸೆಯ ಮೂಲಕವೇ ಕ್ಲೇರ್ ವೇದ ಸಂಸ್ಥೆ ಗುಣಪಡಿಸಿದೆ ನಾನು ಕೂಡ ಸಿರ್ಸಿ ಶಾಲೆಯಲ್ಲಿ ಚಿಕಿತ್ಸೆ ಪಡೆತ್ತಿದ್ದೇನೆ , ಸಂಸ್ಥೆ ಅವರು ದೊಡ್ಡ-ದೊಡ್ಡ ನಗರದಲ್ಲಿ ಶಾಖೆ ಪ್ರಾರಂಭಿಸಿದ್ದರೇ ಹೆಚ್ಚಿನ ಹಣ ಮಾಡಿತ್ತಿದ್ದರು, ಆದರೆ ಗ್ರಾಮೀಣ ಭಾಗದ ಜನರಿಗೆ ಕಡಿಮೆ ಖರ್ಚಿನಲ್ಲಿ ಚಿಕಿತ್ಸೆ ನೀಡುವ ಸೇವಾ ಮನೋಭಾವ ಹೊಂದಿದೆ ಜನರು ಇದರ ಪ್ರಯೋಜನಾ ಪಡೆದುಕೊಳ್ಳಿ ಎಂದರು.

ನಗೆ ಹಬ್ಬ ಹಾಸ್ಯ ಕಾರ್ಯಕ್ರಮದಲ್ಲಿ ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ನರಸಿಂಹ ಜೋಷಿ, ಬಸವರಾಜ ಮಹಾಮನಿ ಅವರು ತಮ್ಮ ಹಾಸ್ಯದ ಮಾತುಗಳಿಂದ ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಜನರಿಗೆ ಹಾಸ್ಯದ ರಸದೌಣ ಪಡಿಸಿದರು.

ಕಾರ್ಯಕ್ರಮದಲ್ಲಿ ಕ್ಲೈರ್ ವೇದ ಸಂಸ್ಥೆ ಸಂಸ್ಥಾಪಕ ಡಾ. ಪ್ರವೀಣ್ ಜೇಕಬ್, ಸಿರ್ಸಿ ನಿಸರ್ಗ ಮನೆಯ ಡಾ. ವೆಂಕಟರಮಣ ಹೆಗಡೆ, ಡಾ. ಶ್ವೇತಾ, ನಿವೃತ್ತ ಪ್ರಾಂಶುಪಾಲ ಎಚ್. ಜಯಪ್ಪ, ಉಪ ಪ್ರಾಂಶುಪಾಲ ಮಹಾದೇವಪ್ಪ, ಮುಖಂಡರಾದ ಜಯಶೀಲ ಗೌಡ, ರಫೀಕ್ ಅಹ್ಮದ್ ಪಟೇಲ್ ಇದ್ದರು




**ಆಧಾರ್ ಕಾರ್ಡ ತಿದ್ದುಪಡಿ ಮಾಡಲಾಗುವುದು**

1.ಮೊಬೈಲ್ ನಂಬರ್.
2.ವಿಳಾಸ ಬದಲಾವಣೆ
3.ತಂದೆ/ಪತಿಯ ಹೆಸರು
ತಿದ್ದುಪಡಿ ಮಾಡಲಾಗುವುದು

**ಬಸ್ ನಿಲ್ದಾಣ ಶಿರಾಳಕೊಪ್ಪ**




ಮೊಬೈಲ್ : 9844491854



## ಸಿನಿ ಸ್ವಾರಸ್ಯ :- "ದ್ವಾರಕೀಶ್ ನುಡಿ ನಮನ"

# "ದ್ವಾರಕೀಶ್ ಬೆಳೆಸಿದ ನಟರೆಲ್ಲ ಕೈಕೊಟ್ಟಾಗ ಆಸರೆಯಾಗಿದ್ದ ರಾಜಕುಮಾರ್"

### ಸಿನಿ-ಸ್ವಾರಸ್ಯ

ಒಮ್ಮೆ ತುಂಬಾ ಲಾಸ್ ಆಗಿ ಬೆಂಗಳೂರಿನ ಏರ್ಪೋರ್ಟ್ ನಲ್ಲಿ ಇಳಿದು ಬಂದಾಗ ಎದುರಾದ ಪಾರ್ವತಮ್ಮನವರು ಪ್ರೀತಿಯಿಂದ ಏನೋ ಕುಳ್ಳ! ಮದರಾಸಿನಲ್ಲಿದ್ದ ಮನೆ ಮಾರಿಬಿಟ್ಟಂತೆ ಎಂದು ಕೇಳುತ್ತಾರೆ ಆಗ ದ್ವಾರಕೀಶ್ ರವರು ಹೌದಕ್ಕ ಒಂದು ಸಿನಿಮಾ ಲಾಸ್ ಆಗಿ ಮನೆಯನ್ನು ಮಾರಿಬಿಟ್ಟೆ ಎಂದಾಗ ಆಯ್ತು ಬೆಂಗಳೂರಲ್ಲಿ ಒಂದು ಕಡೆ ಒಳ್ಳೆ ಸೈಟ್ ನೋಡು ನಾನೇ ಮನೆ ಕಟ್ಟಿಸಿ ಕೊಡುತ್ತೇನೆ ಎಂದು ಹೇಳಿದಾಗ ದ್ವಾರಕೀಶ್ ಅತ್ಯಂತ ಬಾವು ಕರಾಗುತ್ತಾರೆ. ಇಂಥಹಾ ದೊಡ್ಡಮನೆ ಕುಟುಂಬವನು ಅರ್ಥ ಮಾಡಿಕೊಳ್ಳದೆ ತುಂಬಾ ತಪ್ಪಾಗಿ ತಿಳಿದುಕೊಂಡಿದ್ದೆ ಎಂದು ಮರುಕ ಪಡುತ್ತಾರೆ. ಕೊನೆಯ ದಿನಗಳಲ್ಲಿ ದ್ವಾರಕೀಶ್ ಅವರು ಯಾವುದೇ ಮೀಡಿಯಾದ ಮುಂದೆ ಬಂದರೂ ರಾಜಕುಮಾರ್ ಕುಟುಂಬದ ಬಗ್ಗೆ ಸ್ಮರಣೆ ಮಾಡುತ್ತಿದ್ದರು. ದ್ವಾರಕೀಶ್ ಅವರು ಇನ್ನು ಸ್ವಲ್ಪ ಕಾಲ ಬದುಕಬೇಕೆಂಬುದು ಅಭಿಮಾನಿಗಳ ಆಸೆಯಾಗಿತ್ತು. ಆದರೂ ಕನ್ನಡ ಒಳ್ಳೆಯ ಚಿತ್ರಗಳನ್ನು ಕೊಟ್ಟು ಮರೆಯಾದ ಮಾಣಿಕ್ಯ ದ್ವಾರಕೀಶ್ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಸುದ್ದಿ ಸಂಚಾರಿ ಪತ್ರಿಕೆ ಮೂಲಕ ಅವರಿಗೆ ಈ ನುಡಿ ನಮನ.



**ವೈಭವ್**

ದ್ವಾರಕೀಶ್ ಅಂದ್ರೆ ಯಾರಿಗೆ ತಾನೇ ಗೊತ್ತಿಲ್ಲ. ಕನ್ನಡದ ಖ್ಯಾತ ಹಾಸ್ಯ ನಟ, ನಿರ್ಮಾಪಕ, ನಿರ್ದೇಶಕ, 48 ಚಿತ್ರಗಳನ್ನು ನಿರ್ಮಿಸಿ, 19 ಚಿತ್ರಗಳನ್ನು ಕನ್ನಡ ತಮಿಳು ತೆಲುಗು ಹಿಂದಿಯಲ್ಲಿ ನಿರ್ದೇಶಿಸಿದ ಮಹಾನ್ ನಿರ್ದೇಶಕ. ದ್ವಾರಕೀಶ್ ಚಿತ್ರಗಳೆಂದರೆ ಸಂಗೀತ, ಉತ್ತಮ ಕಥೆ, ಕುಟುಂಬಕ್ಕೆ ಆತ್ಮೀಯವಾದ ಚಿತ್ರಗಳು. ಇಂಥ ಸಂದರ್ಭದಲ್ಲಿ ಮೊದಲ ಬಾರಿಗೆ 60 ರ ದಶಕದಲ್ಲಿ ಒಂದು ಚಲನಚಿತ್ರವನ್ನು ರಾಜಕುಮಾರ್ ಅವರನ್ನು ಹಾಕಿಕೊಂಡು ನಿರ್ಮಿಸಬೇಕೆಂಬುದು

ಮಹದಾಸೆಯಾಗಿರುತ್ತೆ ಅಂದು ಬಹಳ, ಬಹಳ ಬ್ಯುಸಿಯಾಗಿದ್ದ ರಾಜಕುಮಾರ್ ಅವರ ಕಾಲ್ ಶೀಟ್ ಪಡೆಯಲು 5 ವರ್ಷ ಕಾದ ದ್ವಾರಕೀಶ್ ಅವರು 1969ರಲ್ಲಿ ಮೇಯರ್ ಮುತ್ತಣ್ಣ ಎಂಬ ಚಿತ್ರವನ್ನು ನಿರ್ಮಿಸಿ ದರು ಸಿದ್ದಲಿಂಗಯ್ಯ ನಿರ್ದೇಸಿದರು. ಪ್ರಚಂಡ ಜಯಭೇರಿ ಗಳಿಸಿದ ಆ ಚಿತ್ರ ದ್ವಾರಕೀಶ್ ಅವರಿಗೆ ಇನ್ನಿಲ್ಲದ ಸಂಪತ್ತು ಹಾಗೂ ಹೆಸರನ್ನು ತಂದುಕೊಟ್ಟಿತು. ಅದಾದ ನಂತರ ಮತ್ತೆ ರಾಜಕುಮಾರ್ ಅವರ ಕಾಲ್ ಶೀಟ್ ಸಿಕ್ಕಿದ್ದು 1979 ಅಂದರೆ 10 ವರ್ಷಗಳ ನಂತರ ಅದೇ ಭಾಗ್ಯವಂತರು ಎಂಬ ಪ್ರಚಂಡ ಜಯಭೇರಿ ಬಾರಿಸಿದ ಚಿತ್ರ ಆ ಚಿತ್ರದಿಂದ ಅವರ ಜೀವನ ಗತಿಯೇ ಬದಲಾಗಿ ಅದೃಷ್ಟ ಕೈ ಹಿಡಿಯಿತು. ತದನಂತರ ಮತ್ತೊಂದು ಕಾಲ್ ಶೀಟ್ ಪಡೆಯಲು ರಾಜಕುಮಾರ ಅವರ ಬಳಿ ಹೋದಾಗ ವರ್ಷಕ್ಕೆ 14,15,18 ಚಿತ್ರಗಳಲ್ಲಿ ನಟಿಸುತ್ತಿದ್ದ ರಾಜ್ ಪ್ರಭಾವದಿಂದ ಸಮಯ ಕೇಳಿದ ರಾಜಕುಮಾರ ಮೇಲೆ ಬೇಸರಗೊಂಡ ದ್ವಾರಕೀಶ್ ಅವರು ವಿಷ್ಣುವರ್ಧನ್ ಅವರನ್ನ ಹಾಕಿಕೊಂಡು ಸುಮಾರು ಚಲನಚಿತ್ರಗಳನ್ನು ನಿರ್ಮಿಸಿದರು. ರಾಜ್ ಬಗ್ಗೆ ಮುನಿಸಿಕೊಂಡಿದ್ದ ದ್ವಾರಕೀಶ್ ತಮಿಳಿನಲ್ಲಿ ರಜನಿಕಾಂತ್ ಹಾಕಿಕೊಂಡು ನೀ ಬರೆದ ಕಾದಂಬರಿ ( ಕನ್ನಡ ಕಾಪಿ ) ಅಮಿತಾ ಬಚ್ಚನ್ ಹಾಕೊಂಡು ಹಿಂದಿಯಲ್ಲಿ ಅಂಥ ಕಾನೂನು ಹೀಗೆ ಬೇರೆ ಬೇರೆ ಭಾಷೆಗಳಿಗೆ ಬ್ಯುಸಿಯಾಗಿದ್ದ ದ್ವಾರಕೀಶ್ ಅವರು ಈಗಿನ ಚೆನ್ನೈ ಅಂದಿನ ಮದರಾಸಿನಲ್ಲಿ ಬಹು ಬೇಡಿಕೆಯ ನಿರ್ಮಾಪಕರಾಗಿ,ನಿರ್ದೇಶಕರಾಗಿ ಹೆಸರು ಮಾಡಿದರು. ಇಂತಹ ಒಂದು ಸಂದರ್ಭದಲ್ಲಿ 1985 ರ ಸಂದರ್ಭ ಜನ್ಮ ದಿನಾಚರಣೆಯನ್ನು ಬಹಳ ಅದ್ದೂರಿಯಾಗಿ ನಡೆಸಲು ತೀರ್ಮಾನಿಸಿದರು. ಅಂದು ವಿಷ್ಣುವರ್ಧನ್, ರಜನಿಕಾಂತ್ ಸೇರಿದಂತೆ ತಮಿಳುನಾಡಿನ ದಿಗ್ಗಜರನಲ್ಲ ಆಹ್ವಾನ ನೀಡಿದ್ದರು. ರಾತ್ರಿ ಹನ್ನೆರಡು ಗಂಟೆಯಾದರೂ ಯಾವ ಒಬ್ಬ ವ್ಯಕ್ತಿ ಅವರ ಮನೆ ಬಳಿ ಸುಳಿಯಲಿಲ್ಲ, ಅದ್ದೂರಿಯಾಗಿ ಸಂಭ್ರಮಾಚರಣೆ ಮಾಡಲು ತೀರ್ಮಾನಿಸಿದ್ದ ದ್ವಾರಕೀಶ್ ಅವರಿಗೆ ನಿರಾಸೆಯಾಗಿತ್ತು. ರಾತ್ರಿ 12 ಗಂಟೆಗೆ ಯಾರೊಬ್ಬರೂ ಬರದ ಕಾರಣ ಬೇಸರವಾಗಿ ಕುಳಿತರು. ಆಗ ಪಕ್ಕದ ಬೀದಿಯಲ್ಲಿದ್ದ ರಾಜಕುಮಾರ್ ಅವರನ್ನು ಕರೆತರಲು ತಮ್ಮ ಮಗ ಗಿರೀಶನನ್ನು ಕಳಿಸಿದರು. ಆಗ ರಾಜಕುಮಾರ್ ಅವರು ಊಟ ಮಾಡಿ ಮುಗಿಸಿದ್ದ ಸಂದರ್ಭದಲ್ಲಿ ಮಗ ಗಿರಿ ಅಪ್ಪಾಜಿ ಕರೆಯುತ್ತಿದ್ದಾರೆ ಬನ್ನಿ ಎಂದ ತಕ್ಷಣ ಅವರ ಮನೆಗೆ ರಾಜಣ್ಣ ಬಂದರು. ಆಗ ದ್ವಾರಕೀಶ್ ಅವರಿಗೆ ಬೆವರು ಬಂದಂತಹ ಸಂದರ್ಭ ಮಹಾನಟ ನಾನು ಕರೆದ ತಕ್ಷಣ ನಮ್ಮನೆಗೆ ಬಂದರು ಆದ್ರೆ ನಾನು ಬೆಳೆಸಿ ದ ಯಾವ ನಟರು ಕೂಡ ನನ್ನ ಮನೆಗೆ ಬರಲಿಲ್ಲ ಎಂಬುದು ಅವರ ಆತ್ಮಾವಲೋಕನಕ್ಕೆ ಹಿಡಿದ ಕನ್ನಡಿಯಾಗಿತ್ತು. ರಾಜಕುಮಾರ್ ಅವರ ಕ್ಷಮೆ ಕೇಳಿ ನೋಡಿ ಸರ್ ನಾನು ಇಷ್ಟೊಂದು ಅಧೂರಿಯಾಗಿ ನಮ್ಮವರೆಲ್ಲ ಸೇರಿಸಿ ಒಂದು ಬರ್ತಡೇ ಆಚರಿಸಬೇಕೆಂದುಕೊಂಡಿದ್ದೆ, ನಿಮ್ಮನ್ನು ಕರೆಯಲಿಲ್ಲ ಆದರೆ ಕರೆದವರು ಬರಲಿಲ್ಲ ನೀವು ಬಂದಿದ್ದು ನನಗೆ ಮಹಾ ಭಾಗ್ಯ,ನಾನು ಕರೆಯಲು ಬರದೇ ಸಣ್ಣ ಮಗನನ್ನು ಕಳಿಸಿದೆ ನನ್ನನ್ನು ಕ್ಷಮಿಸಿ ಅಂದರು ಅದಕ್ಕೆ ರಾಜಕುಮಾರರು ನೋಡಿ ಇಂಥದಕ್ಕೆಲ್ಲ ತಲೆಕೆಡಿಸಿಕೊಳ್ಳಬಾರದು, ಏನೇನೋ ಆಗಬೇಕೆಂದು ಭಗವಂತ ಮೊದಲೇ ಬರೆದಿಡುತ್ತಾನೆ. ನಡೆಯಿರಿ ನಿಮ್ಮ ಬರ್ತಡೇ ದಿನವನ್ನು ನಾನು ನಿಮ್ಮ ಜೊತೆ ಸೇರಿ ಆಚರಿಸುತ್ತೇನೆ ಎಂದು ಬಂದು ಕೇಕ್ ಕಟ್ ಮಾಡಿ ತಿನಿಸಿ ಖುಷಿಪಟ್ಟರು. ದ್ವಾರಕೀಶ್ ಗೆ ಇದು ರಾಜಣ್ಣನ್ನ ಮಾನವೀಯತೆ ! ನಾನೇ ಅವರನ್ನು ದ್ವೇಷಿಸಿ ಬಿಟ್ಟೆ ಎಂದು ಮರುಕ ಪಟ್ಟರು ನಂತರ ರಾಜಕುಮಾರ್ ಅವರೇ ಅಳುತಿದ್ದ ದ್ವಾರಕೀಶ್ ಮನೆಯಲ್ಲಿ ಇದ್ದ ಬಾರನ್ನು ಓಪನ್ ಮಾಡಿ ಕೈಯಲ್ಲಿ ಗ್ಲಾಸ್ ಅನ್ನು ಕೊಟ್ಟು ತಾವೇ ಸ್ವತಃ ಅವರಿಗೆ ಡ್ರಿಂಕ್ಸ್ ಅನ್ನು ಹಾಕಿಕೊಟ್ಟಿದ್ದನ್ನು ದ್ವಾರಕೀಶ್ ರವರು ಪದೇ ಪದೇ ಸ್ಮರಣೆ ಮಾಡಿದ್ದರು. ನಂತರ ರಾಜಕುಮಾರ್ ಅವರು ಮಂಡಿ ನೋವಿನಿಂದ ಮದ್ರಾಸಿನ ಲೀಲಾವತಿ ಹಾಸ್ಪಿಟಲ್ ನಲ್ಲಿ ಅಡ್ಮಿಟ್ ಆದಾಗ ಅಂತಹಾ ಮಂಡಿ ನೋವಿನಲ್ಲೂ ಎದ್ದು ನಿಂತ ಡಾಕ್ಟರ್ ರಾಜಕುಮಾರ್ ಅವರು ಅನ್ನದಾತರು ಬರಬೇಕು ! ಅನ್ನದಾತರು ಬರಬೇಕು ! ಎಂದು ಕೈ ಮುಗಿದಾಗ ದ್ವಾರಕೀಶ್ ಅವರು ಹೇಳಿದ್ದು ಅಣ್ಣ ನೀವು ನಮಗಿಂತ ಹಿರಿಯರು ಹಾಗೆಲ್ಲ ಮುಗಿಯಬಾರದು ಎಂದಾಗ, ನಾವೆಲ್ಲ ಈ ಮಟ್ಟಕ್ಕೆ ಬರಲು ನಿಮ್ಮಂಥ ನಿರ್ಮಾಪಕರೇ ಕಾರಣ ನಿಮ್ಮಿಂದಲೇ ನಾವು ಈ ಮಟ್ಟದಲ್ಲಿರುವುದು ಹಾಗಾಗಿ ನಿರ್ಮಾಪಕರು ಅನ್ನದಾತರು ಅಂದರು. ಆಗ ದ್ವಾರಕೀಶ್ ಅವರು ನಾವಲ್ಲಣ್ಣ ದೇವರು ಎಂತೆಂಥ ಪಾತ್ರಗಳನ್ನು ಎಲ್ಲಾ ವಿವಿಧ ಮಹಾ ಮಹಾರಾಜರ ಮಹಾದೇವರ ಪಾತ್ರಗಳ ನಿರ್ವಹಿಸಿ ಮುಗಿಸಿ ಬಿಟ್ಟಿದ್ದೀರಿ ! ನೀವೆಲ್ಲವೇ ನಮಗೆ ದೇವರು ಎಂದು ಕಣ್ಣಿರಾದಾಗ ಒಬ್ಬರನ್ನೊಬ್ಬರು ತಪ್ಪಿಕೊಂಡು ಕಣ್ಣೀರಾದರು. ತದನಂತರ ದ್ವಾರಕೀಶ್ ಅವರೇ ಹೇಳುವಂತೆ ಒಮ್ಮೆ ತುಂಬಾ ಲಾಸ್ ಆಗಿ ಬೆಂಗಳೂರಿನ ಏರ್ಪೋರ್ಟ್ ನಲ್ಲಿ ಇಳಿದು ಬಂದಾಗ ಎದುರಾದ ಪಾರ್ವತಮ್ಮನವರು ಪ್ರೀತಿಯಿಂದ ಏನೋ ಕುಳ್ಳ! ಮದರಾಸಿನಲ್ಲಿದ್ದ ಮನೆ ಮಾರಿಬಿಟ್ಟಂತೆ ಎಂದು ಕೇಳುತ್ತಾರೆ ಆಗ ದ್ವಾರಕೀಶ್ ರವರು ಹೌದಕ್ಕ ಒಂದು ಸಿನಿಮಾ ಲಾಸ್ ಆಗಿ ಮನೆಯನ್ನು ಮಾರಿಬಿಟ್ಟೆ ಎಂದಾಗ ಆಯ್ತು ಬೆಂಗಳೂರಲ್ಲಿ ಒಂದು ಕಡೆ ಒಳ್ಳೆ ಸೈಟ್ ನೋಡು ನಾನೇ ಮನೆ ಕಟ್ಟಿಸಿ ಕೊಡುತ್ತೇನೆ ಎಂದು ಹೇಳಿದಾಗ ದ್ವಾರಕೀಶ್ ಅತ್ಯಂತ ಬಾವು ಕರಾಗುತ್ತಾರೆ. ಇಂಥಹಾ ದೊಡ್ಡಮನೆ ಕುಟುಂಬವನು ಅರ್ಥ ಮಾಡಿಕೊಳ್ಳದೆ ತುಂಬಾ ತಪ್ಪಾಗಿ ತಿಳಿದುಕೊಂಡಿದ್ದೆ ಎಂದು ಮರುಕ ಪಡುತ್ತಾರೆ. ಕೊನೆಯ ದಿನಗಳಲ್ಲಿ ದ್ವಾರಕೀಶ್ ಅವರು ಯಾವುದೇ ಮೀಡಿಯಾದ ಮುಂದೆ ಬಂದರೂ ರಾಜಕುಮಾರ್ ಕುಟುಂಬದ ಬಗ್ಗೆ ಸ್ಮರಣೆ ಮಾಡುತ್ತಿದ್ದರು. ದ್ವಾರಕೀಶ್ ಅವರು ಇನ್ನು ಸ್ವಲ್ಪ ಕಾಲ ಬದುಕಬೇಕೆಂಬುದು ಅಭಿಮಾನಿಗಳ ಆಸೆಯಾಗಿತ್ತು. ಆದರೂ ಕನ್ನಡ ಒಳ್ಳೆಯ ಚಿತ್ರಗಳನ್ನು ಕೊಟ್ಟು ಮರೆಯಾದ ಮಾಣಿಕ್ಯ ದ್ವಾರಕೀಶ್ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಸುದ್ದಿ ಸಂಚಾರಿ ಪತ್ರಿಕೆ ಮೂಲಕ ಅವರಿಗೆ ಈ ನುಡಿ ನಮನ.